**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .**

**ಸಿ.ಸಿ. ಸಂಖ್ಯೆಃ 36 /2022**

ಹೆಸರು - ರುದ್ರೇಶ್ .ಎಂ ಸಿ.ಡಬ್ಲ್ಯೂಃ 7

ವಯಸ್ಸುಃ 43 ಪಿ.ಡಬ್ಲ್ಯೂಃ 2

**ತಂದೆಃ** ಮೂಡ್ಲಪ್ಪ

ಉದ್ಯೋಗಃ ಮುಖ್ಯಪೇದೆ , ಸಂತೆಬೆನ್ನೂರು ಸರ್ಕಲ್

ವಾಸ ಸ್ಥಳ - ಚನ್ನಗಿರಿ

ಸಾಕ್ಷಿಗೆ ದಿನಾಂಕಃ**22-08-2022** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಸಅಅರವರಿಂದ ಮುಖ್ಯ ವಿಚಾರಣೆ

2020 ರಿಂದ 2022 ಮಾರ್ಚ್ ರವರೆಗೆ ಮುಖ್ಯ ಪೊಲೀಸ್ ಪೇದೆ ಚನ್ನ ಗಿರಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ .

ದಿಃ 20-10-2021 ರಲ್ಲಿ ಚಾಸಾ 12 ರವರು ಮತ್ತು ಚಾಸಾ 6 ರವರು ಕಳ್ಳತನ ಪ್ರಕರಣ ಚನ್ನಗಿರಿ ಟೌನ್ ಅಕ್ಕಪಕ್ಕದಲ್ಲಿ ಹೆಚ್ಚುತ್ತಿರುವುದರಿಂದ ನನ್ನನ್ನು ಕರೆದುಕೊಂಡು ತ್ಯಾವರೆಕೆರೆ ಕ್ರಾಸ್ ಬಳಿ ಗಸ್ತಿಗೆ ಹೋದೆವು . ಸದರಿ ಸಮಯದಲ್ಲಿ ಹೊನ್ನೆಬಾಗಿ ಗ್ರಾಮದ ಕಡೆಯಿಂದ ಒಬ್ಬ ಆಸಾಮಿ ಚನ್ನಗಿರಿ ಟೌನ್ ಕಡೆಗೆ ಬೈಕಿನಲ್ಲಿ ಬರುತ್ತಿದ್ದ ಆಸಾಮಿ ಪೊಲೀಸ್ ರವಾಹನವನ್ನು ನೋಡಿ ಬೈಕ್ ನ್ನು ಅಲ್ಲಿಯೇ ಬಿಟ್ಟು ಪರಾರಿಯಾಗಲು ಪ್ರಯತ್ನಪಟ್ಟನು. ನಾವು ಅನುಮಾನಗೊಂಡು ಸದರಿ ಆರೋಪಿಯನ್ನು ಹಿಡಿದುಕೊಂಡೆವು . ಅವನನ್ನು ವಿಚಾರಿಸಲಾಗಿ ಆತನ ಹೆಸರು ಸುರೇಶ ಯಾನೆ ಎಗ್ಗನಹಳ್ಳಿ ಸುರೇಶ ಆಲಿಯಾಸ್ ಜಾನಿ , ತಂದೆ ಬಸವರಾಜಪ್ಪ , ಯಕ್ಕನಹಳ್ಳಿ ಗ್ರಾಮ, ಹೊನ್ನಾಳಿ ತಾಲ್ಲೂಕು ಎಂದು ತಿಳಿಸಿರುತ್ತಾನೆ . ಚಾಸಾ 12 ರವರು ಆತನ ಬೈಕ್ ನ ದಾಖಲೆಗಳನ್ನು ಕೇಳಲಾಗಿ ಕಬ್ಬಳ ಗ್ರಾಮದ ಮನೆ ಮುಂದೆ ನಿಂತಿದ್ದ ವಾಹನವನ್ನು ಕಳ್ಳತನ ಮಾಡಿಕೊಂಡು ಬಂದಿರುವುದಾಗಿ ತಿಳಿಸಿರುತ್ತಾನೆ . ಸದರಿ ಬೈಕ್ ನ ಸಂಃ ಕೆಎ 17 -ಇಬಿ-4087 ಆಗಿತ್ತು . ಸದರಿ ಬೈಕ್ ನ ಬಗ್ಗೆ ವಿಚಾರಿಸಲಾಗಿ ಬಸವಪಟ್ಟಣ ಪೊಲೀಸ್ ಠಾಣೆಯಲ್ಲಿ ಸಿಆರ್ ಸಂಃ 127/2021 ರಲ್ಲಿ ಪ್ರಕರಣ

ದಾಖಲಾಗಿರುತ್ತದೆ ಎಂದು ತಿಳಿಸಿರುತ್ತಾರೆ .

ಮುಂದುವರೆದು ವಿಚಾರಿಸಲಾಗಿ ದಿನಾಂಕಃ 30-08-2021 ಗೊಪ್ಪೇನಹಳ್ಳಿ ಗ್ರಾಮದ ಹೈಸ್ಕೂಲ್‌ನ ಪಕ್ಕ ಬಿ.ಎಸ್.ಎನ್.ಎಲ್ ಕಛೇರಿಯ ಕಿಟಕಿ ಗಾಜನ್ನು ಹೊಡೆದು ಒಳನುಗ್ಗಿ 7 ಮೀಟರ್ ಉದ್ದದ ತಾಮ್ರದ ತಂತಿಯನ್ನು ಕತ್ತರಿಸಿರುತ್ತೇನೆ ಎಂದು ತಿಳಿಸಿರುತ್ತಾನೆ . ಸದರಿ ತಾಮ್ರದ ತಂತಿಯು ಎಲ್ಲಿ ಎಂದು ವಿಚಾರಿಸಿದಾಗ ಅಪರಿಚಿತ ಗುಜರಿ ವ್ಯಾಪಾರಿಗೆ ರೂಃ 6,000/- ಗಳಿಗೆ ಮಾರಾಟ ಮಾಡಿರುತ್ತೇನೆ ಎಂದು ತಿಳಿಸಿರುತ್ತಾನೆ. ಸದರಿ ವಿಚಾರವಾಗಿ ಸಿ.ಆರ್ ಸಂಃ 311/2021 ರಲ್ಲಿ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲೆಯಾಗಿರುತ್ತದೆ ಎಂಬುದು ತಿಳಿದು ಬಂದಿರುತ್ತದೆ .

ದಿಃ 22-09-2021 ರಂದು ಗೊಪ್ಪೇನಹಳ್ಳಿ ಗ್ರಾಮದ ಮನೆಯಲ್ಲಿ ರಾತ್ರಿ ಸಮಯದಲ್ಲಿ ಬೀಗ ಹೊಡೆದು ಒಂದು ಜೊತೆ ಕಿವಿಯೋಲೆ , ಉಂಗುರ ಮತ್ತು ರೂಃ55,000/- ನಗದನ್ನು ಕಳ್ಳತನ ಮಾಡಿರುವುದಾಗಿ ತಿಳಿಸಿರುತ್ತಾನೆ . ಸದರಿ ಪ್ರಕರಣದ ಮಾಲುಗಳ ಬಗ್ಗೆ ವಿಚಾರಿಸಲಾಗಿ ಸದರಿ ರೂಃ 55,000/- ಗಳಲ್ಲಿ ರೂಃ 50,000/- ಖರ್ಚು ಮಾಡಿ ನನ್ನ ಬಳಿ ಒಂದು ಜೊತೆ ಕಿವಿಯೊಲೆ, ಉಂಗುರ ಮತ್ತು ಕೇವಲ ರೂಃ 5,000/- ಉಳಿದಿದೆ ಎಂದು ಅದನ್ನು ನನ್ನ ಪ್ಯಾಂಟಿನ ಜೇಬಿನಲ್ಲಿ ಇದೆ ಅದನ್ನು ನಾನು ಈಗ ಮಾರಾಟ ಮಾಡಲು ಚನ್ನಗಿರಿಗೆ ಹೋಗುತ್ತಿದ್ದೇನೆ ಎಂದು ತಿಳಿಸಿರುತ್ತಾನೆ . ಸದರಿ ವಿಚಾರವಾಗಿ ಸಿ.ಆರ್ ಸಂಃ 348/2021 ರಲ್ಲಿ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲೆಯಾಗಿರುತ್ತದೆ ಎಂಬುದು ತಿಳಿದು ಬಂದಿರುತ್ತದೆ .

ನಂತರ ಪಂಚರಾದ ಚಾಸಾ 4 ಮತ್ತು 5 ರವರನ್ನು ಬರಮಾಡಿಕೊಂಡು ಅವರ ಸಮ್ಮುಖದಲ್ಲಿ ಬೆಳಗ್ಗೆ 8.00 ರಿಂದ 9.00 ಗಂಟೆಯವರೆಗೆ ಅಮಾನತ್ತು ಪಂಚನಾಮೆಯನ್ನು ಮಾಡಿಕೊಂಡಿರುತ್ತೇವೆ . ಸದರಿ ಪಂಚನಾಮೆಯ ಸಮಯದಲ್ಲಿ ರೂಃ 2,000/- ಗಳನ್ನು ಅಮಾನತ್ತುಪಡಿಸಿಕೊಂಡಿದ್ದು, ಅದನ್ನು ಈಗ ಸಾಕ್ಷಿಗೆ ತೋರಿಸಲಾಗಿ

ಅದನ್ನು ಸಾಕ್ಷಿಯು ಗುರುತಿಸಿದ್ದರಿಂದ ಎಂ.ಓ 1 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ ಅದನ್ನು ಗುರುತಿಸಿರುತ್ತಾರೆ. ಈಗಾಗಲೇ ಸದರಿ ಪಂಚನಾಮೆಯನ್ನು ನಿ ಪಿ 3 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿಯು ಗುರುತಿಸಿದ್ದರಿಂದ ನಿ ಪಿ 3 ಬಿ ಎಂದು ಗುರುತಿಸಲಾಯಿತು .

ಸದರಿ ಪ್ರಕರಣದಲ್ಲಿ ಬೈಕ್ ನ್ನು ಅಮಾನತ್ತು ಮಾಡಿ ಪೋಟೋವನ್ನು ತೆಗೆಯಲಾಯಿತು. ಅದನ್ನು ಸಾಕ್ಷಿಯು ಗುರುತಿಸಿದ್ದರಿಂದ ಸದರಿ 4 ಪೋಟೋಗಳನ್ನು ನಿ ಪಿ 4 ರಿಂದ ನಿ ಪಿ 7 ಎಂದು ಗುರುತಿಸಲಾಯಿತು .

ಅಮಾನತ್ತು ಪಡಿಸಿಕೊಂಡ ಇತರೆ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಈ ದಿನ ವಿಡಿಯೋ ಕಾನ್ಫ್ ರೆನ್ಸ್ ಮೂಲಕ ತೋರಿಸಲಾಗಿ ಸಾಕ್ಷಿಯು ಗುರುತಿಸಿರುತ್ತಾರೆ .

ಅದೇ ದಿನ ಸ್ಥಳದಲ್ಲಿ ಚಾಸಾ 4 ಮತ್ತು 5 ರವರ ಸಮಕ್ಷಮದಲ್ಲಿ ಬೆಳಗ್ಗೆ 9.30 ರಿಂದ 10.15 ರವರೆಗೆ ಸ್ಥಳ ಪಂಚನಾಮೆಯನ್ನು ಮಾಡಿರುತ್ತೇವೆ . ಆರೋಪಿಯು ಪಿರ್ಯಾದಿರವರ ಮನೆಯನ್ನು ತೋರಿಸಿ ನಾನು ಇದೇ ಸ್ಥಳದಲ್ಲಿಯೇ ಕಳ್ಳತನ ಮಾಡಿದ್ದು ಎಂದು ತಿಳಿಸಿರುತ್ತಾನೆ .

ಸಾಕ್ಷಿಗೆ ಆರೋಪಿಗೆ ತೋರಿಸಿದ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಅದನ್ನು ಗುರುತಿಸಿರುತ್ತಾರೆ. ಈಗಾಗಲೇ ಸದರಿ ಸ್ಥಳ ಪಂಚನಾಮೆಯನ್ನು ನಿ ಪಿ 8 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿಯು ಗುರುತಿಸಿದ್ದರಿಂದ ನಿ ಪಿ 8 ಎ ಎಂದು ಗುರುತಿಸಲಾಯಿತು .

ಸದರಿ ಸಮಯದಲ್ಲಿ ಪೋಟೋವನ್ನು ತೆಗೆಸಿರುತ್ತೇವೆ. ಅದನ್ನು ಸಾಕ್ಷಿಯು ಗುರುತಿಸಿದ್ದರಿಂದ ಸದರಿ ಪೋಟೋವನ್ನು ನಿ ಪಿ 9 ಎಂದು ಗುರುತಿಸಲಾಯಿತು.

ಸದರಿ ವಿಚಾರವಾಗಿ ಚಾಸಾ 13 ರವರ ಮುಂದೆ ಸಂಪೂರ್ಣ ಹೇಳಿಕೆಯನ್ನು ನೀಡಿರುತ್ತೇನೆ .

**ಪಾಟೀಸವಾಲು ಆರೋಪಿ ಪರ ವಕೀಲರಿಂದಃ**

ದಿಃ 20-10-2021 ರಂದು ತ್ಯಾವರೆಕೆರೆ ಕ್ರಾಸ್ ಹತ್ತಿರ ನಾನು ಇದ್ದೆನು ಎಂದರೆ ಸರಿ. ತ್ಯಾವರೆಕೆರೆ ಕ್ರಾಸ್ ನಿಂದ ಚನ್ನಗಿರಿಗೆ ಸುಮಾರು 1.00 ಕಿ.ಮೀ ಅಂತರವಿದ್ದು , ತ್ಯಾವರೆಕೆರೆ ಕ್ರಾಸ್ ನಿಂದ ಹೊನ್ನೆಬಾಗಿ ಗ್ರಾಮಕ್ಕೆ 3 ಕಿ.ಮೀ ಇರುತ್ತದೆ . ಸದರಿ ದೂರವನ್ನು ಕ್ರಮಿಸಲು ಎಷ್ಟು ಸಮಯ ಹಿಡಿಯುತ್ತದೆ ಎಂದರೆ ಸಾಕ್ಷಿಯು ನಾವು ಹೊನ್ನೆಬಾಗಿ ಗ್ರಾಮಕ್ಕೆ ಹೋಗಿಲ್ಲ , ಅದರ ತ್ಯಾವರೆಕೆರೆ ಕ್ರಾಸ್ ಬಳಿ ಇದ್ದೆವು ಎಂದು ನುಡಿಯುತ್ತಾರೆ . ಹೊನ್ನೆಬಾಗಿ ಗ್ರಾಮದಿಂದ ಆರೋಪಿಯು ಯಾವ ಯಾವ ದಿಕ್ಕಿನಿಂದ ಯಾವ ದಿಕ್ಕಿ ನ ಕಡೆಗೆ ಹೋಗುತ್ತಿದ್ದ ಎಂದರೆ ಸಾಕ್ಷಿಯು ನಮ್ಮ ಜೀಪನ್ನು ನೋಡಿ ಬೈಕ್ ನ್ನು ಬಿಟ್ಟು ಓಡಿ ಹೋಗಲು ಪ್ರಯತ್ನ ಪಟ್ಟಿದ ಸಮಯದಲ್ಲಿ ನಾವು ಆರೋಪಿಯನ್ನು ಹಿಡಿದಿರುತ್ತೇವೆ . ಆರೋಪಿ ಆ ದಿನ ಯಾವ ಬಣ್ಣದ ಬಟ್ಟೆ ತೊಟ್ಟಿದ್ದ ಎಂದು ಹೇಳಲು ಆಗುವುದಿಲ್ಲ .

ದಿನಾಂಕಃ 30-08-2021 ಗೊಪ್ಪೇನಹಳ್ಳಿ ಗ್ರಾಮದ ಹೈಸ್ಕೂಲ್‌ನ ಪಕ್ಕ ಬಿ.ಎಸ್.ಎನ್.ಎಲ್ ಕಛೇರಿಯ ಕಿಟಕಿ ಗಾಜನ್ನು ಹೊಡೆದು ಒಳನುಗ್ಗಿ 7 ಮೀಟರ್ ಉದ್ದದ ತಾಮ್ರದ ತಂತಿಯನ್ನು ಮಾರಾಟ ಮಾಡಿದ್ದ ವ್ಯಕ್ತಿಯನ್ನು ದೊಷಾರೋಪಣಾ ಪಟ್ಟಿಯಲ್ಲಿ ಸೇರ್ಪಡಿಸಿಲ್ಲ ಎಂದರೆ ಸರಿ. ದಿಃ 20-10-2021 ರಂದು ಆರೋಪಿಯಿಂದ ವಶಪಡಿಸಿಕೊಂಡ ರೂಃ 2,000/- ನಗದಿನ 500 ಮುಖಬೆಲೆಯು ನೋಟುಗಳು ಎಂದು ನುಡಿಯುತ್ತಾರೆ .

ಸದರಿ ಪ್ರಕರಣದಲ್ಲಿ ಆರೋಪಿಯಿಂದ ಅಮಾನತ್ತುಪಡಿಸಿಕೊಂಡ ಒಟ್ಟು ಹಣ ರೂಃ 2,000 ಮತ್ತು 5,000/- ಗಳನ್ನು ಆರೋಪಿಯು ತನ್ನ ಪ್ಯಾಂಟ್ ಜೇಬಿನಲ್ಲಿ

ಇರಿಸಿಕೊಂಡಿದ್ದನು . ಆದರೆ ಯಾವ ಭಾಗದ ಜೇಬಿನಲ್ಲಿ ಎಂದು ನನಗೆ ಹೇಳಲು ಆಗುವುದಿಲ್ಲ . 7 ಮೀಟರ್ ಉದ್ದದ ತಾಮ್ರದ ತಂತಿಯನ್ನು ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಕಳ್ಳತನ ಗೊಂಡ 7 ಮೀಟರ್ ತಾಮ್ರದ ತಂತಿಯನ್ನು ಹೊರತುಪಡಿಸಿ ಒಟ್ಟು ಎಷ್ಟು ಉದ್ದದ ತಾಮ್ರದ ತಂತಿಯನ್ನು ಕಛೇರಿಯಲ್ಲಿ ಒಳಪಡಿಸಿದ್ದರು ಎನ್ನುವುದರ ಬಗ್ಗೆ ನಮ್ಮ ವರದಿಯಲ್ಲಿ ನಮೂದಿಸಿಲ್ಲ . ಸದರಿ ಆರೋಪಿಯ ಮೇಲೆ ಸಿಸಿ 21/2022 ಹಾಗೂ ಗೌಃ ಪ್ರಧಾನ ಜೆ.ಎಂ.ಎಫ್.ಸಿ. ಚನ್ನಗಿರಿ ಯಲ್ಲಿ ಸಿಸಿ 601/2022 ಪ್ರಕರಣ ದಾಖಲಾಗಿದೆ ಎಂದರೆ ಸರಿ .

ಆರೋಪಿಯು ಗಾಡ್ರೇಜ್ ಬೀರೂವನ್ನು ಯಾವ ಆಯುಧವನ್ನು ಬಳಸಿ ತೆಗೆದಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಚಾಸಾ 5 ಮತ್ತು 4 ರವರ ಸಮಕ್ಷಯ ಯಾವುದೇ ಪಂಚನಾಮೆಯನ್ನು ಮಾಡಿಲ್ಲ, ಠಾಣೆಯಲ್ಲಿಯೇ ಬರೆಯಲಾಗಿದೆ ಎಂದರೆ ಸರಿಯಲ್ಲ . ಯಾವುದೇ ಎಂ.ಓಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ . ಸದರಿ ಪ್ರಕರಣದಲ್ಲಿ ಪೋಟೋಗಳಿಗೆ ಸಂಬಂಧಿಸಿದ ಸಿ.ಡಿ.ಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ . ಇಲಾಖೆಯ ಅಂಕಿ ಅಂಶಗಳಿಗೊಸ್ಕರ ಆರೋಪಿಯು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ .

**<u>ಮರುವಿಚಾರಣೆ-ಇಲ್ಲ</u>**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)

**ಓ.ಹೇ.ಕೇ. ಸರಿ ಇದೆ .**

ಸಹಿ/-

ಹೆಚ್ಚುವರಿ . ಜೆಎಂಎಫ್ ಸಿ,

ಚನ್ನಗಿರಿ